

ಆಗದಷ್ಟು ಆ ಮುಗ್ಧ ತರುಣ ನಾಚಿಹೋಗಿದ್ದಾರೆ. ಸನ್ಮಾನ–ಪುರಸ್ಕಾರಗಳ ನಡುವೆ ಜನರ ನಡುವಿನ ಪ್ರಶಂಸೆಯ ಸಹವಾಸವೇ ಬೇಡ ಎನ್ನುವಂತಿದ್ದಾರೆ.

ಸಾಗರದ ಗಾಯಕಿ ಸುಹಾನಾ ಕೂಡ ತನ್ನ ಗಾನ ಮಾಧುರ್ಯದಿಂದ ರಾಜ್ಯದ ಸುಗಮ ಸಂಗೀತ ಪ್ರೇಮಿಗಳ ಹೃದಯವನ್ನೇ ಕದ್ದಿದ್ದಳು. ಆದರೆ ಅವಳಿಗೆ ವಿಧಿಸಿದ್ದ ಡ್ರೆಸ್ ಕೋಡ್ ಹಾಗೂ ಹಾಡಿನ ಆಯ್ಕೆ ಒಂದಿಷ್ಟು ವಿವಾದವನ್ನು ಹುಟ್ಟುಹಾಕಿದ್ದು ಸುಳ್ಳಲ್ಲ. ಬುರ್ಖಾಧಾರಿ ಸುಹಾನಾ ಹಾಡಿದ ದೇವರನಾಮ ಮೇಲಿಂದ ಮೇಲೆ ವಾಹಿನಿಯಲ್ಲಿ ಪ್ರಸಾರವಾದುದು ಕೂಡ ಮತ್ತೊಂದು ರೀತಿಯಲ್ಲಿ ಕಹಿ ಘಟನೆಗೆ ಕಾರಣವಾಗಿತ್ತು. ಕಾಡಿನ ಹಾಡಿಯಲ್ಲಿ ಆಡಿ ಬೆಳೆದಿದ್ದ ಹುಡುಗ ರಾಜೇಶ್ ತನಗೆ ದಕ್ಕಿದ ಖ್ಯಾತಿ, ಮನ್ನಣೆ, ಹಣದ ಹೊಳೆಯಲ್ಲಿ ಖಿನ್ನನಾಗಿ ಬಿಟ್ಟ. ತಾನೆಂದೂ ನಿರೀಕ್ಷೆ ಮಾಡಿರದ ಮಟ್ಟವನ್ನು ತಲುಪಿದ 'ಜಂಗಲ್ ಜಾಕಿ' ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ತನ್ನೆಲ್ಲ ಸಾಧನೆಯನ್ನು ನೆನಪಾಗಿ ಉಳಿಸಿಹೋದ.

ಈಚೆಗಷ್ಟೇ ಬಿಗ್‌ಬಾಸ್‌ನಲ್ಲಿ ತನ್ನದೇ ಆದ ಗುಣವಿಶೇಷಣಗಳಿಂದ ವೀಕ್ಷಕರ ಆಕರ್ಷಣೆಯ ಕೇಂದ್ರದಂತಿದ್ದ ಅಲ್ಪಸಂಖ್ಯಾತರ ಪ್ರತಿನಿಧಿ ಆದಂ ಪಾಷಾ ಈಗ ಹೊಸದಾಗಿ ಸುದ್ದಿಯಾಗಿದ್ದರು. ಬಿಗ್‌ಬಾಸ್‌ನಿಂದ ಹೊರಬರುತ್ತಿದ್ದಂತೆ 'ತಕಧಿಮಿತ' ಡ್ಯಾನ್ಸ್ ರಿಯಾಲಿಟಿ ಶೋನಲ್ಲಿ ಅವರು ತಮ್ಮನ್ನು ಗುರುತಿಸಿಕೊಂಡಿದ್ದರು. ಸಾಲ್ಸಾ ಸೇರಿದಂತೆ ಹಲವು ನೃತ್ಯ ಪ್ರಕಾರಗಳಲ್ಲಿ ಪಳಗಿದ್ದ ಅವರು,





'ತಕಧಿಮಿತ' ವೇದಿಕೆಯನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದರು. ಆದರೆ, ಆ ಶೋನಿಂದ ಬೇಸರಹೊತ್ತು ಹೊರಬಂದಿದ್ದಾರೆ. ಮಾತ್ರವಲ್ಲ, ವೇದಿಕೆ ತನ್ನನ್ನು ಸರಿಯಾಗಿ ನಡೆಸಿಕೊಂಡಿಲ್ಲ ಎನ್ನುವ ಗಂಭೀರ ಆರೋಪವನ್ನೂ ಅವರು ಮಾಡಿದ್ದಾರೆ.

## ರಿಯಾಲಿಟಿಯೂ ನಡುಗುತ್ತಿದೆ...

ಸಾಮಾಜಿಕ ಮಾಧ್ಯಮಗಳು ಇತ್ತೀಚಿನ ದಿನಗಳಲ್ಲಿ ಟೀವಿಯನ್ನು ಮೀರಿ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಿವೆ. ವೈರಲ್ ಎನ್ನುವ ಮೋಡಿ ಎಂತಹ ಪುಟ್ಟ ಪ್ರತಿಭೆಯನ್ನೂ ಸೆಲೆಬ್ರಿಟಿಯಾಗಿ ಬಿಂಬಿಸುವಂತಿದೆ. ಸತ್ವ ಇದ್ದರೆ ಒಂದೇ ಒಂದು ಯೂಟ್ಯೂಬ್ ಬಿಂಬದ ಮೂಲಕ ಜನಪ್ರಿಯತೆಯನ್ನು ಸಾಧಿಸಿ ತಮ್ಮ ಪ್ರತಿಭೆಯನ್ನು ಸಾಬೀತು ಮಾಡಿಬಿಡಬಹುದು. ತಾಂತ್ರಿಕ ಕ್ರಾಂತಿ ಮನೋರಂಜನಾ ಕ್ಷೇತ್ರವನ್ನು ಅಷ್ಟು ಸರಳವಾಗಿಸಿದೆ. ಶ್ರೀಸಾಮಾನ್ಯನಿಗೂ ಜನಪ್ರಿಯತೆ ದಕ್ಕುವಂತೆ ಮಾಡಿದೆ. ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಟಿಕ್‌ಟಾಕ್, ಯೂಟ್ಯೂಬ್ ಟೀವಿಯ ರಿಯಾಲಿಟಿ ಶೋಗಳಿಗೇ ಸವಾಲಾಗಿದೆ. ಈ ಸ್ಪರ್ಧೆ ಮೊದಲು ಇರಲಿಲ್ಲ. ಒಂದು ಮನೆಯಲ್ಲಿ ಕುಟುಂಬ ಸಮೇತರಾಗಿ ಟೀವಿ ಸ್ಕ್ರೀನ್ ಮುಂದೆ ಕೂರುವ ಪದ್ಧತಿ ಕಡಿಮೆಯಾಗುತ್ತಿದೆ. ಒಬ್ಬೊಬ್ಬರು ಒಂದೊಂದು ಮೊಬೈಲ್ ಸ್ಕ್ರೀನ್‌ನಲ್ಲಿ ತಮ್ಮ ದೃಷ್ಟಿ ನೆಟ್ಟು ಒಂಟಿಯಾಗಿ ಮೂಲೆ